<u>ಪ್ರಧಾನ ಜಿಲ್ಲಾ ಮತ್ತು ಎಂ.ಎ.ಸಿ.ಟಿ., ನ್ಯಾಯಾಲಯ, ಮಡಿಕೇರಿ-ಕೊಡಗು</u>

ಎಂವಿಸಿ ಸಂಖ್ಯೆ: **43/2023**

**PW-1**

ಸಾಕ್ಷಿಯನ್ನು ದಿನಾಂಕ **15-03-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಖ್ಯವಿಚಾರಣೆ ಅರ್ಜಿದಾರರ ಪರ ಶ್ರೀ ಎಂ.ಎನ್.ಎಸ್ ವಕೀಲರಿಂದಃ</u>

ನಾನು ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರಿಕೆ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ದಾವೆಗೆ ಸಂಬಂದಪಟ್ಟಂತೆ ದಾಖಲಾತಿಗಳನ್ನ ಹಾಜರುಪಡಿಸಿದ್ದೇನೆ. ಪ್ರ.ವ.ವರದಿ ಪ್ರತಿ ನಿಪಿ-**1** ಎಂದು, ಮಹಜರ್ ನ ಪ್ರತಿ ನಿಪಿ-**2** ಎಂದು, ಎಂ ವಿ ವರದಿ ನಿಪಿ-**3** ಎಂದು, ದೋಷಾರೋಪಣೆ ಪಟ್ಟಿ ನಿಪಿ-**4** ಎಂದು, ಕ್ರಿಮಿನಲ್ ಪ್ರಕರಣ ಸಿಸಿ 41/2023 ರ ಆದೇಶದ ಹಾಳೆ ನಿಪಿ-**5** ಎಂದು ಗುರುತಿಸಲಾಯಿತು. ಬೈಕನ್ನ ರಿಪೇರಿ ಮಾಡಿಸಿರುವ ಬಗ್ಗೆ ಬಿಲ್ ನಿಪಿ-**6** ಎಂದು ಗುರುತಿಸಲಾಯಿತು. ಬೈಕ್ ನನಗೆ ಸೇರಿದೆ ಎಂಬ ಬಗ್ಗೆ ಆರ್.ಸಿ ಪ್ರತಿ ಹಾಜರುಪಡಿಸಿದ್ದೇನೆ ಮೂಲ ದಾಖಲೆಯನ್ನು ವಾಪಸ್ಸು ನೀಡಲಾಗಿದೆ. ಅದರ ಪ್ರತಿಯನ್ನ ನಿಪಿ-**7** ಎಂದು ಗುರುತಿಸಲಾಯಿತು.

<u>ಪಾಟೀಸವಾಲು **3** ನೇ ಎದುರುದಾರರ ಪರ ಶ್ರೀ ಕೆ.ಡಿ.ಡಿ. ವಕೀಲರಿಂದಃ</u>

ಕಾಲವಕಾಶ ಕೋರಿದ್ದರಿಂದ ಮುಂದೂಡಿದೆ.

<u>ಪಾಟೀಸವಾಲು-**1** ಮತ್ತು **2** ನೇ ಎದುರುದಾರರ ಪರ ವಕೀಲರಿಂದಃ</u>

( 1 ಮತ್ತು 2 ನೇ ಎದುರುದಾರರು ಏಕಪಕ್ಷಿಯವಾಗಿರುವುದರಿಂದ ಪಾಟೀಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಎಂ.ಎ.ಸಿ.ಟಿ. ನ್ಯಾಯಾಧೀಶರು,
ಕೊಡಗು-ಮಡಿಕೇರಿ.